ಹಕ್ಕು ಪತ್ರ ವಿತರಣೆ

1379(1670); ಡಾ॥ ರಫೀಕ್ ಅಹ್ಮದ್ (ತುಮಕೂರು ನಗರ)

ಅ) ರಾಜ್ಯದ ವಿವಿಧ ಭಾಗಗಳಲ್ಲಿರುವ ಒಟ್ಟು ಕೊಳಗೇರಿಗಳೆಷ್ಟು; ಕೊಳಗೇರಿ ನಿವಾಸಿಗಳು ಇರುವ ಪ್ರದೇಶದಲ್ಲಿ ಎಷ್ಟು ಮನೆಗಳಿಗೆ / ಗುಡಿಸಲುಗಳಿಗೆ ನಿವೇಶನದ ಹಕ್ಕುಪತ್ರ ವಿತರಿಸಲಾಗಿದೆ;

ಆ) ತುಮಕೂರನ್ನು ಕೊಳಗೇರಿ ಪ್ರದೇಶ ಮುಕ್ತವನ್ನಾಗಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಡಾ॥ ಎಂ.ಹೆಚ್. ಅಂಬರೀಷ್ (ವಸತಿ ಸಚಿವರು)

ಅ) ರಾಜ್ಯದಲ್ಲಿ ಗುರುತಿಸಿರುವ ಕೊಳಚೆ ಪ್ರದೇಶಗಳು: – 2,804

ಘೋಷಿತ ಕೊಳಚೆ ಪ್ರದೇಶಗಳು – 2,397

ಅಘೋಷಿತ ಕೊಳಚೆ ಪ್ರದೇಶಗಳು – 407

ಮಂಡಳಿಯ ಕಾಯಿದೆ ಪ್ರಕಾರ ಕೊಳಚೆ ನಿವಾಸಿಗಳಿಗೆ ಹಕ್ಕುಪತ್ರ ನೀಡಲು ಅವಕಾಶವಿರುವುದಿಲ್ಲ.

ಆ) ಕೇಂದ್ರ ಸರ್ಕಾರವು ದೇಶವನ್ನು **"ಕೊಳಗೇರಿ ಮುಕ್ತ ದೇಶ"**ವನ್ನಾಗಿ ಮಾಡಲು ರಾಜೀವ್ ಅವಾಸ್ ಯೋಜನೆಯನ್ನು 2012ರಲ್ಲಿ ಜಾರಿಗೊಳಿಸಿದೆ. ಈ ಯೋಜನೆಯಡಿ ತುಮಕೂರು ನಗರವನ್ನು ಕೊಳಗೇರಿ ಮುಕ್ತ ನಗರವನ್ನಾಗಿ ಮಾಡಲು ಆಯ್ಕೆ ಮಾಡಲಾಗಿರುತ್ತದೆ. ಈ ಕುರಿತು ಕಾರ್ಯಯೋಜನೆಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ.

ಕಾರ್ಯ ಯೋಜನೆ ಪ್ರಸ್ತಾವನೆ ಪ್ರಕಾರ ತುಮಕೂರು ನಗರವನ್ನು ಕೊಳಗೇರಿ ಮುಕ್ತ ನಗರವನ್ನಾಗಿ ಮಾಡಲು, 9,376 ಮನೆಗಳ ನಿರ್ಮಾಣ ಮಾಡಬೇಕಾಗಿರುತ್ತದೆ. ಇಲ್ಲಿಯವರೆಗೆ ತುಮಕೂರು

ನಗರದಲ್ಲಿ ರಾಜೀವ್ ಅವಾಸ್ ಯೋಜನೆಯಡಿ ಮಂಜೂರಾದ ಮನೆಗಳ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ವಿವರ ಕೆಳಗಿನಂತಿದೆ.

ಕ್ರ. ಸಂ.	ಯೋಜನೆಯ ವಿವರ	ಕೊಳಚೆ ಪ್ರದೇಶಗಳ ಸಂಖ್ಯೆ	ಮಂಜೂರಾದ ಮನೆಗಳು	ಅಂದಾಜು ಮೊತ್ತ (₹ ಕೋಟಿಗಳಲ್ಲಿ)
1	ತುಮಕೂರು (ಪೈಲೆಟ್)	7	1200 (ಜಿ+2)	69.96
2	ತುಮಕೂರು	6	1566 (ಜಿ)	67.98
	ಒಟ್ಟು	13	2766	137.94

ರಾಜೀವ್ ಅವಾಸ್ ಯೋಜನೆಯು 2022ನೇ ವರ್ಷದವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯೊಳಗೆ ತುಮಕೂರು ನಗರವನ್ನು ಕೊಳಗೇರಿ ಮುಕ್ತ ನಗರವನ್ನಾಗಿ ಮಾಡಲು ಉಳಿದ 6,610 ಮನೆಗಳ ನಿರ್ಮಾಣವನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ತಾಲ್ಲೂಕು ಪಂಚಾಯತಿಗಳಲ್ಲಿ ಅಧಿಕಾರಿಗಳ ಕೊರತೆ

1380(1671); ಡಾ॥ ರಫೀಕ್ ಅಹ್ಮದ್ ಎಸ್. (ತುಮಕೂರು ನಗರ)

1) ರಾಜ್ಯದಲ್ಲಿರುವ ತಾಲ್ಲೂಕು ಪಂಚಾಯತಿಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಪೈಕಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರಲ್ಲದ ಇತರೆ ಇಲಾಖೆಗಳ ಅಧಿಕಾರಿಗಳು ಎಷ್ಟು; ಇವರ ಕೊರತೆಯನ್ನು ನೀಗಿಸಲು ಹೊಸದಾಗಿ ಸದರಿ ಅಧಿಕಾರಿಗಳನ್ನು ನೇಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

2) ಹಾಗಿದ್ದಲ್ಲಿ, ಯಾವಾಗ ನೇಮಕಾತಿ ಮಾಡಿಕೊಳ್ಳಲಾಗುವುದು?